# ಇಂಗ್ಲಿಷ್ ಭಾಷೆ: ನಮಗೆಷ್ಟು ಬೇಕು?

**ಕನ್ನಡಕ್ಕೆ: ಎಸ್.ಬಿ. ಜೋಗುರ**

ಇಂಗ್ಲಿಷ್ ಭಾಷೆಯನ್ನು ಇಂದು ವಾಣಿಜ್ಯೀಕೃತ ಮತ್ತು ರಾಜಕೀಯ ಮೌಲ್ಯಗಳ ಹೆಸರಲ್ಲಿ ಕಲಿಯಲಾಗುತ್ತದೆ. ನಮ್ಮ ಹುಡುಗರ ಆಲೋಚನಾ ಕ್ರಮವೂ ಇದಕ್ಕೆ ಹೊರತಾಗಿಲ್ಲ. ಸದ್ಯದ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಕಲಿತರೆ ಮಾತ್ರ ಸರಕಾರಿ ಉದ್ಯೋಗ ಸಾಧ್ಯ ಎನ್ನುವ ನಂಬುಗೆ ಬಲವಾಗಿದೆ. ಹುಡುಗಿಯರಿಗೆ ಇಂಗ್ಲಿಷ್ ಭಾಷೆಯನ್ನು ಅವರ ಮದುವೆಗೆ ಪಾಸ್‌ಪೋರ್ಟ್ ಎನ್ನುವ ಹಾಗೆ ನೀಡಲಾಗುತ್ತದೆ. ನಾನು ಅನೇಕ ಸಂದರ್ಭಗಳಲ್ಲಿ ಮಹಿಳೆಯರು ಕೂಡಾ ಇಂಗ್ಲಿಷ್ ಭಾಷೆಯನ್ನು ಕಲಿತು ಬ್ರಿಟಿಷ್ ಅಧಿಕಾರಿಗಳೊಂದಿಗೆ ವ್ಯವಹರಿಸಲು ಬಯಸಿರುವುದನ್ನು ಗಮನಿಸಿರುವೆ. ಕೆಲವು ಗಂಡಂದಿರುಗಳೊಂದಿಗೆ ಅವರ ಪತ್ನಿಯರು ಮಾತನಾಡುವುದಿಲ್ಲ. ಅವರೇನಿದ್ದರೂ ಇಂಗ್ಲಿಷ್ ಭಾಷೆಯನ್ನಾಡುವ ಅವರ ಗೆಳೆಯ, ಗೆಳತಿಯರೊಂದಿಗೆ ಮಾತನಾಡುತ್ತಾರೆ. ಕೆಲವು ಕುಟುಂಬಗಳಲ್ಲಂತೂ ಇಂಗ್ಲಿಷ್ ಭಾಷೆಯನ್ನೇ ಮಾತೃಭಾಷೆಯನ್ನಾಗಿ ಮಾಡಿಕೊಂಡವರೂ ಇದ್ದಾರೆ. ಯುವಕರಂತೂ ಇಂಗ್ಲಿಷ್ ಭಾಷೆಯನ್ನು ಕಲಿಯದಿದ್ದರೆ ಭಾರತದ ಸ್ವಾತಂತ್ರ್ಯ ಸಾಧ್ಯವೇ ಇಲ್ಲ ಎಂದು ಪರಿಭಾವಿಸಿರುವುದಿದೆ. ಇದು ಕ್ಯಾನ್ಸರ್ ರೋಗದಂತೆ ಹಬ್ಬತೊಡಗಿದೆ. ಶಿಕ್ಷಣದ ಅರ್ಥವೇ ಇಂಗ್ಲಿಷ್ ಭಾಷೆಯನ್ನು ಕಲಿಯುವುದು ಎನ್ನಲಾಗುತ್ತದೆ.

ಈ ಎಲ್ಲ ಸಂಗತಿಗಳು ನಮ್ಮ ಅಳಿವಿನ ಹಾಗೂ ಗುಲಾಮಗಿರಿಯ ಸಂಕೇತಗಳಾಗಿ ತೋರುತ್ತವೆ. ಪ್ರಾದೇಶಿಕ ಭಾಷೆಗಳು ಈ ನಡುವೆ ಉಸಿರುಕಟ್ಟಿ ಸಾಯುತ್ತಿವೆ. ನಮ್ಮ ಪಾಲಕರು ಮತ್ತು ಗಂಡಂದಿರು ತಮ್ಮ ಮಕ್ಕಳಿಗೆ, ಪತ್ನಿಯರಿಗೆ ಪತ್ರಗಳನ್ನು ಕೂಡಾ ಇಂಗ್ಲಿಷ್ ಭಾಷೆಯಲ್ಲಿಯೇ ಬರೆಯುವುದನ್ನು ಆರಂಭಿಸಿದ್ದಾರೆ. ಇದನ್ನು ನನಗೆ ಸಹಿಸಲು ಸಾಧ್ಯವಾಗುತ್ತಿಲ್ಲ. ನನಗೆ ಮುಕ್ತ ಪರಿಸರದಲ್ಲಿ ಅಪಾರ ನಂಬುಗೆಯಿದೆ. ನನ್ನ ಮನೆಯಲ್ಲಿ ನಾನು ನಾನು ಎಲ್ಲ ಬಗೆಯ ಸಂಸ್ಕೃತಿಗಳಿಗೆ ಅವಕಾಶವೀಯುತ್ತೇನೆ. ಹಾಗಾಗಿಯೇ ನಾನು ನನ್ನ ಮನೆಯ ಕಿಟಕಿಗಳನ್ನು ಮುಚ್ಚುವುದಿಲ್ಲ, ಗೋಡೆಗಳನ್ನು ಎಬ್ಬಿಸುವದಿಲ್ಲ. ನನಗೆ ಮುಕ್ತ ಗಾಳಿ ಬೇಕು. ಹಾಗೆಂದು ನಾನೇ ನನ್ನ ಮನೆಯಲ್ಲಿ ಅಪರಿಚಿತನಂತೆ, ಗುಲಾಮನಂತೆ ಬದುಕುವುದನ್ನು ಇಷ್ಟಪಡುವದಿಲ್ಲ. ನಾನು ನನ್ನ ಸಹೋದರಿಯರ ಮೇಲೆ ಈ ಇಂಗ್ಲಿಷ್ ಭಾಷೆಯ ಭಾರವನ್ನು ಹೊರಿಸಲಾರೆ. ಆ ಮೂಲಕ ಅವರಲ್ಲಿ ಒಣಪ್ರತಿಷ್ಠೆಯನ್ನು ಬೆಳೆಸಲಾರೆ. ನಾನು ನಮ್ಮ ಯುವಕ, ಯುವತಿಯರಿಗೆ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳು ಇಂಗ್ಲಿಷ್ ಭಾಷೆಯಲ್ಲಿ ಎಷ್ಟರ ಮಟ್ಟಿಗೆ ಕಲಿತಿದ್ದಾರೆಯೋ ಅಷ್ಟು ಕಲಿಯುವಂತೆ ಕರೆ ನೀಡುತ್ತೇನೆ. ಹಾಗೆ ಕಲಿತ ಜ್ಞಾನವನ್ನು ಬೋಸ್, ರಾಯ್ ಮತ್ತು ರವೀಂದ್ರನಾಥ ಠಾಕೂರರ ಹಾಗೆ ಬಳಸಲು ಹೇಳುತ್ತೇನೆ. ನಮ್ಮ ನಮ್ಮ ಮಾತೃಭಾಷೆಯಲ್ಲಿಯೇ ಅತ್ಯುತ್ತಮವಾದ ವಿಚಾರಗಳನ್ನು ಅಭಿವ್ಯಕ್ತಪಡಿಸಬಹುದು ಎನ್ನುವ ನಂಬುಗೆ ನನ್ನದು. ನನ್ನದು ಧಾರ್ಮಿಕ ಬಂದಿಖಾನೆಯಲ್ಲ. ದೇವರಿಂದ ಸೃಷ್ಟಿಯಾದ ಕಟ್ಟ ಕಡೆಯ ಮನುಷ್ಯನಿಗೂ ಅಲ್ಲಿ ಜಾಗವಿದೆ. ಆದರೆ ಒಣಪ್ರತಿಷ್ಠೆ, ಜನಾಂಗ, ವರ್ಣ ಮುಂತಾದವುಗಳಿಗೆ ಅಲ್ಲಿ ಜಾಗವಿಲ್ಲ.

(1–6–1921)